# ಕೋರಿ ಕರೆವೆ

ಕೋರಿ ಕರೆವೆ ಗುರು ಶ್ರೀ ರಾಘವೇಂದ್ರನೆ | ಬಾರೋ ಮಹಾಪ್ರಭುವೇ

ಚಾರು ಚರಣ ಯುಗ ಸಾರಿ ನಮಿಪೆ | ಬೇಗ ಬಾರೋ ಹೃದಯ

ಸುಖ ಸಾರ ರೂಪವ ತೋರೋ

ಎಲ್ಲಿ ನೋಡಲು ಹರಿ ಅಲ್ಲಿ ಕಾಣುವನೆಂದು | ಕ್ಷುಲ್ಲ ಕಂಬವನೋಡೆದು

ನಿಲ್ಲದೆ ನರಹರಿ ಚೆಲ್ವಿಕೆ ತೋರಿದ | ಫುಲ್ಲಲೋಚನ ಶಿಶು ಪ್ರಲ್ಲಾದನಾಗಿ ಬಾರೋ

ದೋಷ ಕಳೆದು ಸಿಂಹಾಸನವೇರಿದ | ದಾಸ ಕುಲವ ಹೊರೆದ

ಶ್ರೀಶನರ್ಚಕನಾಗಿ ಪೋಷಿಸಿ ಹರಿ ಮತ

ವ್ಯಾಸ ತ್ರಯವ ಗೈದ ವೇಷ ತಳೆದು ಬಾರೋ

ಮೂರ್ಜಗ ಮಾನಿತ ತೇಜೋ ವಿರಾಜಿತ | ಮಾಸದ ಮಹಾ ಮಹಿಮ

ಓಜೆಗೊಳಿಸಿ ಮತಿ ರಾಜೀವ ಭೇದದಿ

ಪೂಜೆಗೊಂಬುವ ಗುರು ರಾಜ ರೂಪದಿ ಬಾರೋ

ಮಂತ್ರ ಸದನೊದೊಳು ಸಂತ ಸುಜನರಿಗೆ | ಸಂತೊಷ ಸಿರಿ ಗೆರೆದು ಕಂತು ಪಿತನ ಪಾದ

ಸಂತತ ಸೇವಿಪ ಶಾಂತ ಮೂರುತಿ

ನಿನ್ನಂತರಂಗ ಬಾರೋ

ಈಸಮಯದಿ ನನ್ನಾಸೆ ನಿನ್ನೊಳು | ಬಲು ಸೂಸಿ ಹರಿಯುತಿಹುದು

ಕೂಸಿಗೆ ಜನನಿ ನಿರಾಸೆಗೊಳಿಸುವಳೇ

ದೊಷ ಕಳೆದು ವಿಠಲೇಶ ಹೃದಯ ಬಾರೋ